Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ.31 ಸಂಚಿಕೆ 40] ಬುಧವಾರ 19—11—47 [ಬಿಡಿ ಪ್ರತಿ 3 ಪೈ

ಜಪಾನಿನಲ್ಲಿ 'ಗುಪ್ತ ಸರಕಾರ' ಭಯ

ಹೆಂಡಕುಡಿಯದೆ ಇದ್ದದ್ದಕ್ಕೆ ಒದ್ದರು

ಇದು ಧರ್ಮಾವಂದ ಸಮಾಚಾರ. ಅಲ್ಲಿಗೆ ವಕ್ಕದ ಗ್ರಾಮದಿಂದ ನೂರಾ ಟಕ್ಕೆ ಹೆಂಡವು ಬಂದಾಗ ಗ್ರಾಮಸ್ಥರು ಅದನ್ನು ಬಹಿಷ್ಕರಿಸಿದರು. ಒಬ್ಬ ರಡ್ಡಿ ಪ್ರಮುಖನು ಇದನ್ನು ಕಂಡು ಕೋಪಗೊಂಡು ತನ್ನ ಸೇವಕರಿಂದ ಅವರನ್ನು ಒದಿಸಿ, ಬಲವಂತದಿಂದ ಅವರ ಬಾಯಿಯೊಳಗೆ ಹೆಂಡವನ್ನು ಹುಯ್ಯಿಸಿದನು

ವಿಗ್ರಹ ಧ್ವಂಸ ಮಾಡಿದರು

ಇದು ಕೋಸೇರುವಿನಿಂದ ಬಂದಿರುವ ಸಮಾಚಾರ. ಬಕ್ರೀದ್ ಹಬ್ಬದ ದಿನ ಮುಸ್ಲೀರು ಗ್ರಾಮದೇವತೆಯ ಆಲಯಕ್ಕೆ ನುಗ್ಗಿ ಆಲಯವನ್ನು ಅಶುದ್ಧಗೊಳಿಸಿ ವಿಗ್ರಹವನ್ನು ಪಾಳುಮಾಡಿ ಕಿತ್ತು ಹಾಕಿದರು. ಅಲಂಪೂರಿನ ಇತ್ತೆ ಹಾದುಲ್ ಮುಸಲ್ಮಾನ್ ಸಲಹೆಯೊಂದಿಗೆ ಈ ಕಾರ್ಯವು ನಡೆದಿರುವಂತೆ ತಿಳಿಯಬಂದಿದೆ. (ಜ್ವಾ)

ಗಂಡುಂದರಿಗಾಗಿ

ಜರ್ಮನಿಯ ಸ್ತ್ರೀಯರು ಗಂಡಂದಿರಿಗಾಗಿ ಜಾಹಿರಾತು ಪ್ರಕಟಿಸುತ್ತಿದುವರು.

ಎಲ್ಲಾ ಕಡೆ ಹೀಗಾಗಲಿ

ಬೊಂಬಾಯಿ ಸರಕಾರದವರು ಥಾರ ಪಾಡ ಜಿಲ್ಲೆಯಲ್ಲಿ ಜಹಾದ ಅಂಗಡಿ ಯವರು ಹಾಲು ಉಪಯೋಗಿಸುವದರ ಬದಲು ಹಾಲಿನ ಪುಡಿ ಉಪಯೋಗಿಸ ಬೇಕೆಂದು ಆಜ್ಞೆ ಮಾಡಿದ್ದಾರೆ.

ದೀಪಾವಳಿ ಭೋಜನ

ದೀಪಾವಳಿ ಹಬ್ಬದ ದಿವಸ ವ್ಯಾರಿಸ್ಸಿಸಲ್ಲಿಯ ಜರ್ಮನ್ ಸಂಘದವರು ಭೋಜನಕೂಟವನ್ನೇರ್ಪಡಿಸಿದ್ದರು.

ಟೋಕಿಯೊ ನ 18— ಜಪಾನಿನಲ್ಲಿ 'ಗುಪ್ತ ಸರಕಾರ' ಎಂಬ ರಹಸ್ಯ ವು ತ್ತು ಬಳಸಂಚು ತಂಡದವರಿಂದ ಅಲ್ಲಿಯ ಸರಕಾರಕ್ಕೂ, ಅಮೆರಿಕ ಸೈನ್ಯಕ್ಕೂ ಭೀತಿಯುಂಟಾಗಿದೆಯಂತೆ.

ನವದೆಹಲಿ ನ 18— ಭಾರತ ರಾಜ್ಯಾಂಗ ಸಭೆಯು ಮುಸ್ಲಿಂ ಲೀಗು ಸದಸ್ಯರ ಮುಂದೆ ಡೆಲ್ಲಿಯ ರಾಷ್ಟ್ರೀಯ ಮುಸ್ಲಿಮರು ಕಪ್ಪು ಬಾವುಟ ಪ್ರದರ್ಶಿಸಿ, ಲೀಗ್ ಮೆಂಬರುಗಳೆಲ್ಲ ಸಭೆಗೆ ರಾಜೀನಾಮೆ ಕೊಟ್ಟು ಪಾಕಿಸ್ತಾನಕ್ಕೆ ಹೊಂಡಿರೆಂಬ, ಮತ್ತು ಮಿ || ಜಿನ್ನರ ನಾಯಕತ್ವವನ್ನು ಖಂಡಿಸಿ ಘೋಷಣೆ ಮಾಡಿದರು.

ಅಖಿಲ ಭಾರತ ರಾಷ್ಟ್ರೀಯ ಮಹಾ ಸಭೆಯ (ಕಾಂಗ್ರೆಸ್ಸಿನ) ಮಹಾಧಿವೇಶನವನ್ನು ಮುಂದಿನ ಜನವರಿ ಕಡೆಯೊಳಗೆ ನಡೆಸುವಂತೆ ಏ ಐ ಸಿ ಸಿಯಲ್ಲಿ ನಿರ್ಣಯವಾಯಿತು.

ಪ್ಯಾಲಿಸ್ಟೈನಿನ ವಿಭಜನೆಗೆ ಬಗ್ಗಿ ರಷ್ಯಾ ಅಮೆರಿಕಾಗಳಿಗೆ ಒಪ್ಪಂದವಾಗಿದೆಯೆಂದೂ, ಮುಂದಿನ ಏಪ್ರಿಲ್ 1 ರೊಳಗೆ ಬ್ರಿಟಿಷರು ಪ್ಯಾಲಿಸ್ಟೈನು ಬಿಡಬೇಕೆಂದೂ ಹೇಳಲಾಗಿದೆ

ಭಾರತದ ಗೌ || ಜನರಲ್ ಮೌಂಟ್‌ಬೇಟನ್ನರು ತಮ್ಮ ಪದವಿಯಿಂದ ಈ ವರ್ಷದ ಕಡೆಯೊಳಗೆ ನಿವೃತ್ತರಾಗಬಹುದೆಂದು ಹೇಳಲಾಗಿದೆ.

ಕಾಶ್ಮೀರದಲ್ಲಿ ಧಾಳಿಕಾರರಿಗೆ ಅಪ್ಘಾನಿಸ್ತಾನ ಮತ್ತು ಕೈಬರ್ ಕಣಿವೆ ಮೂಲಕ ಶಸ್ತ್ರಾಸ್ತ್ರ ದೊರೆಯುತ್ತಿದೆಯೆಂದೂ ಈ ನೈಕೆ ಸ್ವಲ್ಪ ಮುದ್ದು ಗುಂಡು ರಷ್ಯದ್ದೆಂದೂ ಲಂಡನ್ ಡೇಲೀ ಮೇಲ್ ಪತ್ರಿಕೆ ಪ್ರಕಟಿಸಿದೆ.

ಪರದೇಶಗಳಂದ ಭಾರತ ಸಾಲಪಡೆದರೇನಾಗುತ್ತೆ ?

ಅದರಿಂದ ಪ್ರಾಪ್ತವಾಗುವ ಅಪಾಯಗಳು ನಿಮಿಗೆ ಸ್ಪಷ್ಟವಾಗಿ ಕಾಣಬರುತ್ತಿವೆ. ಸಾಲವನ್ನು ಕೊಡಬಲ್ಲದ್ದು ಅಮೇರಿಕವು ಮಾತ್ರವೇ. ಈ ಅಮೇರಿಕವು ತನ್ನ ಸಾಮ್ರಾಜ್ಯ ವಿಸ್ತೀರ್ಣಕ್ಕಾಗಿ ಸ್ವಪ್ರಯೋಜನಗಳನ್ನು ಸಾಧಿಸಿಕೊಳ್ಳಲು ಗ್ರೀಸು, ತುರ್ಕಿ ಮೊದಲಾದ ದೇಶಗಳಿಗೆ ಸಾಲವನ್ನು ಕೊಟ್ಟು ಅಲ್ಲಿ ಮಾಡುತ್ತಿರುವ ಕೆಲಸವು ಯಾವುದೋ ಬಹಿರಂಗವಾಗಿದೆ ಸೋಷಲಿಜಮ್ಮೇ ಇರಲು ಸಾಧ್ಯವಿಲ್ಲವೆಂದು ಬ್ರಿಟನ್ನನ್ನು ಹೆದರಿಸುತ್ತಿರುವುದಷ್ಟೆ ! ಆದುದರಿಂದ ಸಾಲವನ್ನು ತೆಗೆದುಕೊಳ್ಳುವದೆಂದರೆ ಸೋಷಲಿಸ್ಟು ಅಭಿವೃದ್ಧಿಯನ್ನು ನಿರೋಧಿಸುವಿಕೆಯೇ ಆಗಿದೆ.

ಯಾನಿಯರ್ ಪಾಲಿಸಿಯು ಯಾವುದೆಂದರೆ — ಯಾವ ಪ್ರಾಂತ್ಯದಲ್ಲಿಯಾಗಲಿ ಭಾವಿ ನಿರ್ಣಯವು ಪ್ರಜೆಗಳದ್ದೇ ಆಗಲಿ ಪಾಲಕರದಲ್ಲ. ಇದು ಇಂದಿಗೂ ಅಂದಿಗೂ ಒಂದೇ ಆಗಿದೆ.

o o

ಪಾಕಿಸ್ತಾನ ಪಾಲಿಸಿ

ಪಾಕೀಸ್ತಾನವು ಮೊದಲಿನಿಂದಲೂ ಸಂಸ್ಥಾನಗಳ ಭಾವಿ ನಿರ್ಣಯವು ಪಾಲಕರಿಂದೇ ಆಗಲಿ ಪ್ರಜೆಗಳದ್ದಲ್ಲವೆಂದು ಹೇಳುತ್ತ ಬಂದಿದೆ. ಈ ವಿಧಾನದಿಂದಲೇ ಜೂನಗಡವನ್ನು ಪ್ರಜಾಭಿಪ್ಪಕ್ಕೆ ವಿರುದ್ಧವಾಗಿ ಪಾಕಿಸ್ತಾನಕ್ಕೆ ಸೇರಿಸಿಕೊಂಡಿತ್ತು. ಪ್ರಜಾಸಾಮ್ಯ ಸೂತ್ರಗಳನ್ನು ಪಾಕೀಸ್ತಾನ ಎಷ್ಟು ಮಾತ್ರ ಅನುಸರಿಸಲು ಇಚ್ಛಿಸಿತೋ ಈ ಪಾಲಿಸಿಯಿಂದ ಸ್ಪಷ್ಟವಾಯಿತು

ಆದರೆ ಅದು ಬಹಳ ಕಾಲ ನಿಲ್ಲಲಿಲ್ಲ. ಒಳ್ಳೆಯದೋ, ಕೆಟ್ಟದ್ದೋ ಒಂದೇ ಪಾಲಿಸಿಗೆ ಕಟ್ಟುಬಿದ್ದಿರುವಿಕೆಯು ಯಾವ ಸ್ವಾತಂತ್ರ್ಯ ರಾಜ್ಯಕ್ಕಾದರೂ ಪ್ರಥಮ ಧರ್ಮವು ಆದರೆ ಕಾಶ್ಮೀರಿನ ರಾಜನು ಯೂನಿಯನ್ನಿನೊಂದಿಗೆ ಸೇರುವಿಕೆಯನ್ನೂ ಕೂಡ ಪ್ರತಿಭಟಿಸುತ್ತಿದೆ.

ಅಂದರೆ ಪಾಕಿಸ್ತಾನಿಗೆ ಯಾವ ಪಾಲಿಸಿಯೂ ಇಲ್ಲ ಅವಕಾಶಕ್ಕೆ ತಕ್ಕಂತೆ ಮಾತನ್ನು ಬದಲಾಯಿಸುವಿಕೆಯನ್ನೇ ಪದ್ಧತಿಯನ್ನಾಗಿಟ್ಟುಕೊಂಡಿರುವುದೇನು ಪಾಕೀಸ್ತಾನ? (ಜ್ವಾ)

ಗೂಂಡಾಗಳ ದುಂಡಾವೃತ್ತಿ

ಪ್ರಜೆಗಳ " ಬಚಾವೋ " ಸೇನೆ

ತಮ್ಮ ದೇಶದ ಮೇಲೆ ಗೂಂಡಾಗಳೋ ಶತ್ರುಗಳೋ ದಂಡೆತ್ತಿ ಬಂದಲ್ಲಿ ಯಾವ ಸ್ವಾತಂತ್ರ್ಯ ಪಿಪಾಸೆಯುಳ್ಳ ಪ್ರಜೆಗಳೂ ಕೈಗಳನ್ನು ಜೋಡಿಸಿಕೊಂಡು ಕೂತುಕೊಳ್ಳುವುದಿಲ್ಲ. ಈ ವಿಷಯವನ್ನು ಕಾಶ್ಮೀರದ ' ಬಚಾವೋ ಸೇನೆಯವರು ' ತೋರಿಸಿರುವರು.

' ತಮ್ಮ ಪ್ರಾಣವನ್ನಾದರೂ ತ್ಯಜಿಸಿ ದೇಶವನ್ನು ರಕ್ಷಿಸಿಕೊಳ್ಳಬೇಕು ' ಎಂದು ಗಾಂಧಿಯವರು ಹೇಳಿರುವರು.

' ಲೋಕತ್ರಯಗಳು ನೀಲಿಕೆಳಗಾದರೂ ಕಾಶ್ಮೀರವನ್ನು ರಕ್ಷಿಸುವೆನು ' ಎಂಬುದು ನೆಹ್ರೂಜಿಯವರ ಧೈರ್ಯಪ್ರಬೋಧೆ.

' ಮಾತೃದೇಶದ ರಕ್ಷಣೆಗಾಗಿ ಕೊನೆಯ ಮನುಷ್ಯನವರೆಗೂ ಎದುರಿಸಿ ನಿಲ್ಲುವೆವು ' ಎಂದು ಕಾಶ್ಮೀರದ ಕೇಸರಿಯು ಘರ್ಜಿಸಿತು.

ಮಾತೃದೇಶದ ರಕ್ಷಣೆಗಾಗಿ ಜಾತಿ ಮತ ಬೇಧವನ್ನು ಲಕ್ಷಿಸದೆ ಹಿಂದೂ ಮುಸ್ಲಿಂ, ಸಿಕ್ ಪ್ರಜೆಗಳು ಒಂದಾಗಿ ನಿಂತು ಗುಂಡಂಗಳನ್ನು ಅದ್ಭುತ ರೀತಿಯಲ್ಲಿ ಎದುರಿಸಿದರು

ಬಚಾವೋ ಸೇನೆಯ: ಸನುಯೋಚಿತ ಕಾರ್ಯವು ಸ್ತುತ್ಯವು ! ಸ್ತುತ್ಯವು ಸ್ತುತ್ಯವು ! (ಜ್ವಾ)

ನಿರುದ್ಯೋಗಿಗಳು

ಹಿಂದೂದೇಶದಲ್ಲಿ 600 ಲಕ್ಷಕ್ಕೆ ಹೆಚ್ಚು ಮಂದಿ ನಿರುದ್ಯೋಗಿಗಳಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಮಂದಿಗೆ ವರ್ಷದಲ್ಲಿ ಬಹಳ ಕಾಲ ಯಾವ ಕೆಲಸವೂ ಇರುವುದಿಲ್ಲ. ಆದುದರಿಂದ ಸರಕಾರದವರು ನಿರುದ್ಯೋಗಿತನವನ್ನು ನಿರ್ಮೂಲ ಮಾಡುವಷ್ಟು ಪರಿಶ್ರಮಗಳನ್ನು ನಡಿಸುವಿಕೆಯು ಅತ್ಯವಶ್ಯಕವು.

o o

ಅಟ್ಲಿಯವರ ಟಗರು

ರಾಮ್ನಾ ಮಹಾರ್ ಪಶು ಪ್ರದರ್ಶನದಲ್ಲಿ ಮಿ || ಅಟ್ಲಿಯವರ ಟಗರು ಬಹುಮಾನವನ್ನು ಪಡೆಯಿತು.

ಸಾದರ ಸ್ವೀಕಾರ

ಶ್ರೀಮಾ ಶ್ರೀಕಂಠ್‌ರವರು ಪ್ರಕಟಿಸಿರುವ 'ಮೈಸೂರು ಸ್ವಾತಂತ್ರ್ಯ ಸಂಗ್ರಾಮದ ಗೆಲವು' ಎಂಬ ಕಿರುಪುಸ್ತಕವನ್ನು ಸಾದರದಿಂದ ಸ್ವೀಕರಿಸಿದ್ದೇವೆ. ಇದು ನಾಲ್ಕಾಣೆ ನಾಣ್ಯಕ್ಕೆ ದೊರೆಯುವುದು. ಮೈಸೂರಿನಲ್ಲಿ ಜವಾಬ್ದಾರಿ ಸರಕಾರದ ಪದವಿಯನ್ನು ಸಂಸ್ಥಾನದ ಸಕಲ ಪ್ರಜೆಗಳೂ ಸೇವಿಸುವುದರಿಂದ ಈ ಗೆಲುವಿನ ಪುಸ್ತಕವನ್ನು ಸಕಲರೂ ಓದಿ ಆನಂದಿಸಬೇಕು. ಅಲ್ಲದೆ ಅದರ ನೆನೆಪಿಗಾಗಿ ಒಂದೊಂದು ಪ್ರತಿಯನ್ನು ಪ್ರತಿಯೊಬ್ಬರೂ ಹೊಂದಿರುವುದು ಯುಕ್ತವಾಗಿದೆ.

At Opera

THINGS TO COME

From 20–11–47

ಮೂಲಿತಿ — ಶಿವಭಾಗ್ಯಂ

ಎಸ್. ವಿ. ಸುಬ್ಬಯ್ಯ — ನಂಬಿಯಾರ್

ಪಾತ್ರವಹಿಸಿರುವ

ಕಂಜನ್

(ತಮಿಳು)

Edited, Printed and Publisbd by M S Krishna Rao at the Satyavadi Ptess Chamaraja Agahar Myrsore.

Woodlands

ಯಶಸ್ವಿ 3 ನೇ ವಾರ

ಅಶೋಕಕುಮಾರ್

ವೀರಾ, ಪ್ಯಾರೊ, ಪಾತ್ರವಹಿಸಿರುವ

ಪಿಸಿಪಿಕಾರಿ

(ಅನೋಘ ಹಿಂದಿ ಚಿತ್ರ)

Save the Cow

ಗೋ ವಧೆ ನಿಲ್ಲಲಿ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪರಸ್ಥಳಕ್ಕೆ

ಅಂಚೆವೆಚ್ಚ ಸೇರಿ ರೂ. 9.

ಸೋಮವಾರದ ಸಂಚಿಕೆ ಮಾತ್ರ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಮೈಸೂರು ಸಿಟಿ ರೇಷನಿಂಗ್ ಆಫೀಸ್

ನಂ. ಸಿ ಇ ಡಿ 259 / 47–48 ತಾ|| 7–11–1947

ನೋಟೀಸು

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಸುಮಾರು 89893 ಹಳೇ ಮತ್ತು ಅನುಪಯುಕ್ತವಾದ ಗೋಣೀಚೀಲಗಳು ನಗರದ ಕೆಲವು ಸರಕಾರಿ ಗೋಡೌನ್‌ಗಳಲ್ಲಿ ಶೇಖರವಾಗಿವೆ. ಅವುಗಳನ್ನು ತಾ|| 8—12—47 ರಿಂದ ಈ ಕೆಳಗೆ ಕಂಡ ಷರತ್ತುಗಳ ಮೇಲೆ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

1 ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರೆಲ್ಲರೂ ರೂ. 50 ಠೇವಣಿ ಇಡಬೇಕು. ಹರಾಜು ಮುಗಿದನಂತರ ಈ ಠೇವಣಿ ವಾಪಸ್ಸಾಡಲಾಗುವುದು.

2 ಹರಾಜಿನಲ್ಲಿ ಕೊನೆಯ ಬಿಡ್ ಮಾಡಿದವರು ಹರಾಜು ಮುಗಿದ ಕೂಡಲೇ ಬೆಕರಿ ಹಣದಲ್ಲಿ ಶೇಕಡಾ 25 ರಷ್ಟು ಹಣವನ್ನು ಅಲ್ಲೇ ಠೇವಣಿ ಇಡಬೇಕು. ಮತ್ತು ಉಳಿದ ಹಣವನ್ನು ಬೆಕರಿಯ ನಿಶ್ಚಯತ್ವವನ್ನು ಅವರಿಗೆ ತಿಳಿಸಿದ ಮೂರು ದಿನಗಳಲ್ಲಿ ಸಲ್ಲಿಸತಕ್ಕದ್ದು. ಹಾಗೆ ಮಾಡದಿದ್ದಲ್ಲಿ ಠೇವಣಿ ಇಟ್ಟ ಹಣವನ್ನು ಸರ್ಕಾರವು ಜಪ್ತಿಮಾಡಿಕೊಂಡು ಚೀಲಗಳನ್ನು ಮತ್ತೆ ಮೂರಾಟ ಮಾಡಲಾದೀತು. ಇದರ ಜವಾಬ್ದಾರಿಯು ಠೇವಣಿಕಾರರ ಮೇಲೆ ಇದ್ದು ಇದರಲ್ಲಿ ಸರಕಾರಕ್ಕೆ ನಷ್ಟವಾಗುವುದಾದರೆ ಅದರ ಜವಾಬ್ದಾರಿಯೂ ಇವರ ಮೇಲೆ ಇರುವುದು. ಲಾಭವಾದರೆ ಇವರಿಗೆ ಅದರಲ್ಲಿ ಭಾಗವಿರಲಾರದು.

3 ನಗರದ ರೇಷನಿಂಗ್ ಆಫೀಸರ್ ಕಡೆಯಿಂದಾಗಲಿ ಅಥವಾ ಅವರ ಅಸಿಸ್ಟೆಂಟರ ಕಡೆಯಿಂದಾಗಲಿ ಹರಾಜಿನ ಕಾರ್ಯರೂಪಗಳು ನಡೆಯುವವು. ಮತ್ತು ಇದರ ಕೊನೆ ತೀರ್ಮಾನವನ್ನು ಬೆಂಗಳೂರಿನಲ್ಲಿರುವ ಮೈಸೂರು ಫುಡ್ ಸಪ್ಲೈಸ್ ಡೈರೆಕ್ಟರಿಂದ ಮಾಡಲಾಗುವುದು. ಇವರಿಗೆ ಹರಾಜು ಒಪ್ಪುವ ಅಥವಾ ಬಿಡುವ ಅಧಿಕಾರವೂ ಉಂಟು ಅದಕ್ಕೆ ಕಾರಣವನ್ನು ಕೇಳುವ ಅಧಿಕಾರವು ಯಾರಿಗೂ ಇರಲಾರದು. ಒಂದು ಸಲ ಹರಾಜು ಒಪ್ಪಿತವಾಗಿದ್ದಲ್ಲಿ ಬಿಡ್ಡರಿಗೆ ಯಾವ ಪ್ರತಿಫಲವೂ ದೊರೆಯಲಾರದು.

4 ಮೇಲೆ 1 ನೇ ಕಲಮಿನಲ್ಲಿ ನಮೂದಿಸಿರುವ ಷರತ್ತಿಗನುಗುಣವಾಗಿ ಕೊನೆಯ ಬಿಡ್ಡರು ಹರಾಜಿನ ಪೂರ್ಣ ಹಣವನ್ನು ಸಲ್ಲಿಸಿದ ನಂತರವೇ ಮಾಲು ತೆಗೆದುಗೊಂಡು ಹೋಗಲು ಅರ್ಹನಾಗುವನು.

5 ಬಿಡ್ಡರುಗಳು ಕೆಲಸದ ದಿನಗಳಲ್ಲಿ ಸಾಯಂಕಾಲ 3 ರಿಂದ 5 ಘಂಟೆ ವರೆಗೆ ಆಯಾ ಡಿಪೋಗಳಲ್ಲಿ ಚೀಲಗಳನ್ನು ನೋಡಬಹುದು

6 ಹರಾಜು ಮುಗಿದಿದ್ದನ್ನು ಹೇಳಿದನಂತರ ಖರೀದಿ ಮಾಡಿದವರು 3 ದಿನಗಳಲ್ಲಿ ಪೂರ್ತಿ ಹಣ ಸಲ್ಲಿಸಿ ಸಾಮಾನು ಸುಫರ್ದು ಪಡೆಯಬೇಕು ತಪ್ಪಿದಲ್ಲಿ ಆಗಬಹುದಾದ ಯಾವ ನಷ್ಟಗಳಿಗೂ ಈ ಕಛೇರಿ ಜವಾಬ್ದಾರಿಯಾಗಲಾರದು.

7 ಮೂರಾಟವಾದ ಈ ಚೀಲಗಳ ಸ್ಥಿತಿಗತಿಗಳ ಬಗ್ಗೆಯೂ, ಮತ್ತಾವ ವಿಷಯಕ್ಕೂ ಸರ್ಕಾರವು ಜವಾಬ್ದಾರವಲ್ಲ.

(ಸಹಿ) ಎಂ. ಶ್ರೀನಿವಾಸಲು ನಾಯ್ಡು

ರೇಷನಿಂಗ್ ಆಫೀಸರ್, ಮೈಸೂರು ಸಿಟಿ

SHAKTI SUDHA

A Superb TONIC